# ಮನುಕುಲಕ್ಕೆ ಮಾರ್ಗದರ್ಶಿ



'ಮನುಷ್ಯ ಧರ್ಮವನ್ನು ಪಾಲಿಸೋಣ, ಮನುಷ್ಯರಾಗೋಣ' ಎಂಬ ಗಾಂಧಿಯವರ ಮಾತು ಈಗಿನ ಕಾಲಕ್ಕೆ ಬಹಳ ಪ್ರಸ್ತುತವೆನಿಸುತ್ತಿದೆ. ಜಾತಿ, ಭಾಷೆಗಳ ನಡುವೆ, ರಾಜ್ಯ, ದೇಶಗಳ ನಡುವಿನ ಸಂಘರ್ಷಗಳು ಹಿಂಸಾತ್ಮಕ ಫಲ ಕೊಡುತ್ತಿರುವ, ಎಲ್ಲದಕ್ಕೂ ಜಗಳ, ಹೊಡೆದಾಟ, ಯುದ್ಧದಲ್ಲಿಯೇ ಉತ್ತರ ಕೊಡಬೇಕೆಂಬ ನಕಾರಾತ್ಮಕತೆ ತುಂಬಿರುವ, ಹಿಂಸೆ ಎಂಬ ಅಸ್ತ್ರವೇ ಪ್ರಬಲ ಎಂಬಂತೆ ಬಿಂಬಿತವಾಗುತ್ತಿರುವ ಈ ಸಂದರ್ಭದಲ್ಲಿ ಗಾಂಧಿ ವಿಚಾರಧಾರೆಗಳು ಬಹಳ ನೆನಪಾಗುತ್ತಿವೆ. ಈಗ ತುಂಬಾ ಅಗತ್ಯವಿರುವುದು, ಹಾಗೆಯೇ ಮನುಕುಲಕ್ಕೆ ಮಾರ್ಗದರ್ಶಿಯಾಗಿರುವುದು ಗಾಂಧಿವಾದವೇ.

ಮನುಕುಲವನ್ನು ಬೆಳಗುವ ಮಾರ್ಗಗಳ ಕುರಿತು ಯೋಚಿಸಿದಾಗ ಕಣ್ಮುಂದೆ ಬರುವುದೇ ಗಾಂಧಿ ತತ್ವಗಳು. ಅಹಿಂಸಾವಾದ, ಸರ್ವ ಸಮಾನತಾವಾದ, ಸರಳತೆ, ಈ ಮೂರೂ ಮನುಷ್ಯರ ಬದುಕಿಗೆ ಮಹಾತ್ಮರ ಮಾರ್ಗದರ್ಶಕಗಳಾಗಿವೆ. ಇದು ಎಲ್ಲ ಕಾಲಕ್ಕೂ ಅನ್ವಯಿಸುವಂಥದ್ದೇ.

ಗಾಂಧಿವಾದ ಈಗಿನ ಕಾಲಕ್ಕಲ್ಲ ಎಂದು ಕೆಲವರು ಮಾತನಾಡುವುದನ್ನು ಕೇಳುತ್ತಿರುತ್ತೇವೆ. ನಮಗೆ ಅನುಸರಿಸಲು ಸಾಧ್ಯವಾಗುತ್ತಿಲ್ಲ ಎಂದ ಮಾತ್ರಕ್ಕೆ ಆ ವಾದವೇ ಸುಳ್ಳು ಅಂತ ಹೇಳುವುದು ತಪ್ಪು. ನಾನು, ನನ್ನ ಮನೆ, ನನ್ನದು ಎಂಬ ಸ್ವಾರ್ಥದ ಸುತ್ತಲೇ ಗಿರಕಿ ಹೊಡೆಯುತ್ತಿರುವ ಈ ಜಗತ್ತಿನಲ್ಲಿ ಗಾಂಧಿಯವರ ಆಶಯದಂತೆ ನಿಸ್ವಾರ್ಥತೆ ಅಲ್ಪಸ್ವಲ್ಪವಾದರೂ ರೂಪುಗೊಂಡರೆ ಒಳ್ಳೆಯ ಸಮಾಜವನ್ನು ಕಟ್ಟಲು ಸಾಧ್ಯ.

—ದಿಶಾ ರಮೇಶ್, ನಟಿ



ಕಲೆ: ಎಂ.ಎಸ್. ಮೂರ್ತಿ

# 'ನಿಷೇಧ ಹೇರುವ ಸರಕಾರ, ಒಳಗೆ ಕೊಡುವುದು ಸಹಕಾರ'

ನಮಗೆಲ್ಲಾ ಗೊತ್ತಿರುವ ಗಾಂಧಿ ತಾತ ಅವರ ತತ್ವ ಎಂದರೆ ಸರಳ ಜೀವನ, ಅಹಿಂಸೆ, ಸದಾ ಸತ್ಯವಾಗಿ ನಡೆಯುವುದು. ರಾಮ ರಾಜ್ಯದ ಕನಸು ಕಂಡ ಅವರು ದೇಶವು ಮದ್ಯಪಾನ ಹಾಗೂ ಭ್ರಷ್ಟಾಚಾರ ಮುಕ್ತವಾಗಬೇಕು ಎಂದು ಹೋರಾಡಿದವರು. ಆದರೆ, ಅವರಂತೆ ಹೋರಾಡುವ ಗುಣ, ವಿಚಾರಧಾರೆಗಳನ್ನು ಭಾರತೀಯರಾದ ನಾವು ಎಷ್ಟರ ಮಟ್ಟಿಗೆ ಪಾಲಿಸುತ್ತಿದ್ದೇವೆ ಅನ್ನೋದು ನಮ್ಮೆಲ್ಲರನ್ನು ಕಾಡಬೇಕಾದ ಪ್ರಶ್ನೆ. ಕನಿಷ್ಠ ಉತ್ತರವನ್ನೂ ನಿರೀಕ್ಷೆ ಮಾಡಲಾಗದಂತಹ ಧಾವಂತದ ಬದುಕಿನಲ್ಲಿ ನಾವಿದ್ದೇವೆ.

ನಿಷ್ಪಕ್ಷಪಾತವಾಗಿ ಆಲೋಚಿಸಿದರೆ ಗಾಂಧೀಜಿಯವರನ್ನು ಪುಸ್ತಕ, ಭಾಷಣಕ್ಕೆ ಸೀಮಿತಗೊಳಿಸಿದ್ದೇವೆ. ನಿಜ ಹೇಳಬೇಕೆಂದರೆ ನಾವು ಅವರಿಗೆ ಅನುಕ್ಷಣ ಮೋಸ ಮಾಡುತ್ತಿದ್ದೇವೆ. ಈ ಮೋಸದಲ್ಲಿ ನಮ್ಮ ನಿಮ್ಮೆಲ್ಲರ ಪಾಲಷ್ಟೇ ಇದೆಯೇ? ಇಲ್ಲ, ದೇಶವನ್ನಾಳಿದ ಎಲ್ಲ ಸರ್ಕಾರಗಳ, ರಾಜಕೀಯ ಪಕ್ಷಗಳ, ಸರ್ಕಾರಿ ಅಧಿಕಾರಿಗಳ, ರಾಜಕಾರಣಿಗಳ ಪಾಲು ದೊಡ್ಡದಿದೆ. ಇದು ಇಡೀ ವ್ಯವಸ್ಥೆ ಮಾಡಿದ ಪ್ರಮಾದವೇ ಆಗಿದೆ.

ಒಂದು ಸರ್ಕಾರ ಆರೋಗ್ಯವೇ ಭಾಗ್ಯ, ಮದ್ಯಪಾನ–ಧೂಮಪಾನದಿಂದ ದೂರವಿರಿ ಎನ್ನುತ್ತೆ. ಕೋಟ್ಯಂತರ ರೂಪಾಯಿ ವ್ಯಯಿಸಿ ಪ್ರಚಾರ ಮಾಡುತ್ತೆ. ಅದೇ ಸರ್ಕಾರ ಅಬಕಾರಿ ಇಲಾಖೆಯ ಹೆಸರಿನಲ್ಲಿ ಮದ್ಯಪಾನ ಮಾರಾಟ ಮಾಡುತ್ತೆ. ಧೂಮಪಾನ ಉತ್ಪನ್ನಗಳ ಮಾರಾಟಕ್ಕೆ ಅನುವು ಮಾಡಿಕೊಡುತ್ತೆ. ಬೇಲಿಯೇ ಎದ್ದು ಹೊಲ ಮೇದ ಕಥೆಗೆ ಇಂತಹ ಸರ್ಕಾರಗಳೇ ಸ್ಪಷ್ಟ ಉದಾಹರಣೆ. 'ನಿಷೇಧ ಹೇರುವ ಸರಕಾರ, ಒಳಗೆ ಕೊಡುವುದು ಸಹಕಾರ' ಎಂಬ ಹಾಡಿನ ಸಾಲಿನಂತಿದೆ.

ಆದರೂ ಈ ವ್ಯವಸ್ಥೆ ಇಂದಲ್ಲ ನಾಳೆ ಬದಲಾಗುತ್ತದೆ ಎನ್ನುವ ಬಲವಾದ ನಂಬಿಕೆ ನನಗಿದೆ. ಗಾಂಧಿ ತತ್ವಗಳು ಮತ್ತೆ ಪ್ರಸ್ತುತವಾಗುತ್ತವೆ. ನಿಧಾನವಾದರೂ ಒಳ್ಳೆಯ ದಿನಗಳು ಬಂದೇ ಬರುತ್ತವೆ. ಸಮಾಜದ ವ್ಯವಸ್ಥೆಯಲ್ಲಿನ ಅನೇಕ ತೊಡಕುಗಳಿಗೆ ಕನ್ನಡಿ ಹಿಡಿಯುವ ಕಾರ್ಯಕ್ಕೆ ತಂತ್ರಜ್ಞಾನ ನೆರವಾಗುತ್ತಿದೆ. ಕ್ರಮೇಣ ಇದು ವ್ಯಾಪಕವಾಗಿ ಪಾರದರ್ಶಕತೆಗೆ ನಾಂದಿಯಾಗಲಿದೆ. ದೇಶದ ಜನ ಶಿಕ್ಷಿತರಾಗುತ್ತಿದ್ದಾರೆ. ಎಲ್ಲ ವಲಯಗಳನ್ನು ತಂತ್ರಜ್ಞಾನ ಆವರಿಸಿಕೊಳ್ಳುತ್ತಿದ್ದು, ಪಾರದರ್ಶಕ ವ್ಯವಸ್ಥೆ ತರುವ ನಿಟ್ಟಿನಲ್ಲಿ ಸರ್ಕಾರ ಕ್ರಮವಹಿಸಬೇಕಿದೆ. ಅನ್ಯಾಯ, ಭ್ರಷ್ಟಚಾರದ ವಿರುದ್ಧ ಸಿಡಿಯುವಂತೆ ಗಾಂಧಿ ತತ್ವಗಳು ಜನರನ್ನು ಪ್ರೇರೇಪಿಸುತ್ತಿವೆ. ನಾವು ಪಾಲಿಸಬೇಕಿದ್ದ ಗಾಂಧಿ ತತ್ವಗಳನ್ನು ತಂತ್ರಜ್ಞಾನವು ಬೇರೊಂದು ರೂಪದಲ್ಲಿ ಪ್ರಸ್ತುತವಾಗಿಸುತ್ತಿದೆ.

—ಅಶ್ವಿನ್ ಹಾಸನ, ನಟ

